ಕೃಷಿ ವಿಜ್ಞಾನ ಕೇಂದ್ರ, ಉತ್ತರ ಕನ್ನಡ , ಶಿರಸಿ

# ಅಡಿಕೆ ಕೀಟಗಳು ಮತ್ತು ರೋಗಗಳು ಹಾಗೂ ಹತೋಟಿ ಕ್ರಮಗಳು

1. ಜೇಡ ನುಸಿ (ಮೈಟ್)

**ಹಾನಿಯ ಲಕ್ಷಣಗಳು**

ಕೆಂಪು ಜೇಡ ನುಶಿಗಳು ಎಲೆಗಳ ಕೆಳಗೆ ಗುಂಪಿನಲ್ಲಿ ಕಂಡು ಬರುತ್ತವೆ ಮತ್ತು ರಸ ಹೀರುತ್ತವೆ. ಎಲೆಗಳ ಮೇಲ್ಭಾಗದಲ್ಲಿ ಹಳದಿ ಮಚ್ಚೆಗಳಾಗುತ್ತವೆ.

**ನಿರ್ವಹಣೆ**

ಜೇಡ ನುಸಿ ಹತೋಟಿಗೆ 2.5 ಮಿ.ಲೀ. ಡಿಕೋಫಾಲ್ 20 ಇ.ಸಿ. ಅಥವಾ 4 ಗ್ರಾಂ ನೀರಿನಲ್ಲಿ ಕರಗುವ ಗಂಧಕ (ಶೇ. 80) ಅಥವಾ 1.7 ಮಿ.ಲೀ. ಡೈಮೀಥೋಯೆಟ್ 30 ಇ.ಸಿ. ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು. ಬಾಧೆ ಕಂಡುಬಂದಲ್ಲಿ ಎರಡು ವಾರಕ್ಕೊಮ್ಮೆ ಇದೇ ಸಿಂಪರಣೆಯನ್ನು ಮಾಡಬೇಕು

2. ಸುಳಿ ತಿಗಣೆ

**ಹಾನಿಯ ಲಕ್ಷಣಗಳು**

ಅಪ್ಸರೆ ಮತ್ತು ಪ್ರೌಢ ತಿಗಣೆಗಳು ಎಳೆ ಎಲೆಗಳು ಮತ್ತು ಹೂ ಗೊಂಚಲಿನಿಂದ ರಸ ಹೀರುತ್ತದೆ. ಇಂತಹ ಭಾಗಗಳ ಮೇಲೆ ಕಂದು ಬಣ್ಣದ ಚುಕ್ಕೆಗಳು ಕಾಣುತ್ತವೆ. ನಂತರ ಎಲೆಗಳು ಮತ್ತು ಎಲೆಗಳು ಹೂ ಗೊಂಚಲುಗಳು ಒಣಗುತ್ತವೆ.

**ನಿರ್ವಹಣೆ**

ಸುಳಿ ತಿಗಣೆ ಅಥವಾ ಹೂ ಗಂಚಲು ತಿನ್ನುವ ಹುಳು ಕಾಣಿಸಿಕೊಂಡಾಗ 2 ಮಿ.ಲೀ. ಎಂಡೋಸ್ಫಾನ್ 35 ಇ.ಸಿ. ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು. ಸುಳಿ ಸುತ್ತಲಿನ ಎಲೆಗಳ ಬುಡದಲ್ಲಿ ಆರು ತಿಂಗಳಿಗೊಮ್ಮೆ 10 ಗ್ರಾಂ ಶೇ. 10ರ ಫೋರೇಟ್ ಹರಳುಗಳನ್ನು ಚಿಕ್ಕ ಪಾಲಿಥೀನ್ ತೂತುಗಳನ್ನು ಮಾಡಿ ಇಡುವುದರಿಂದ ಸುಳಿ ತಿಗಣೆ ಬಾಧೆಯನ್ನು ನಿಯಂತ್ರಿಸಬಹುದು

3. ಹೂಗೊಂಚಲು ತಿನ್ನುವ ಹುಳು

**ಹಾನಿಯ ಲಕ್ಷಣಗಳು**

ಮರಿಹುಳುಗಳು ಹೂಗೊಂಚಲಿನ ಮೇಲೆ ರೇಷ್ಮೆ ಜಾಡು ಮಾಡಿ ಒಳಗಡೆ ಗಂಡು ಹೂಗಳನ್ನು ತಿನ್ನುತ್ತವೆ. ಹೂವಿನ ಬಣ್ಣ ಬದಲಾಗುತ್ತದೆ ನಂತರ ಒಣಗುತ್ತವೆ.

**ನಿರ್ವಹಣೆ**

ಸುಳಿ ತಿಗಣೆ ಅಥವಾ ಹೂ ಗಂಚಲು ತಿನ್ನುವ ಹುಳು ಕಾಣಿಸಿಕೊಂಡಾಗ 2 ಮಿ.ಲೀ. ಎಂಡೋಸ್ಫಾನ್ 35 ಇ.ಸಿ. ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು. ಸುಳಿ ಸುತ್ತಲಿನ ಎಲೆಗಳ ಬುಡದಲ್ಲಿ ಆರು ತಿಂಗಳಿಗೊಮ್ಮೆ 10 ಗ್ರಾಂ ಶೇ. 10ರ ಫೋರೇಟ್ ಹರಳುಗಳನ್ನು ಚಿಕ್ಕ ಪಾಲಿಥೀನ್ ತೂತುಗಳನ್ನು ಮಾಡಿ ಇಡುವುದರಿಂದ ಸುಳಿ ತಿಗಣೆ ಬಾಧೆಯನ್ನು ನಿಯಂತ್ರಿಸಬಹುದು.

4. ಹಿಟ್ಟು ತಿಗಣೆ

**ಹಾನಿಯ ಲಕ್ಷಣಗಳು**

ಬಿಳಿ ಹಿಟ್ಟಿನಂತಹ ತಿಗಣೆಗಳು ಎಲೆಗಳಿಂದ ಮತ್ತು ಸಣ್ಣ ಕಾಯಿಗಳಿಂದ ರಸ ಹೀರುತ್ತವೆ. ಇವುಗಳ ಬಾಧೆಗೊಳಗಾದ ಸಣ್ಣ ಗಿಡಗಳು ಹಳದಿಯಾಗಿ ನಂತರ ಒಣಗುತ್ತವೆ.

**ನಿರ್ವಹಣೆ**

ಪ್ರತಿ ಲೀಟರ್ ನೀರಿಗೆ 1.7 ಮಿ.ಲೀ ಡೈಮಿಥೋಯೇಟ್ 30 ಇ.ಸಿ. ಬೆರೆಸಿ ಸಿಂಪಡಿಸಬೇಕು.

5. ಗೊಣ್ಣೆ ಹುಳು

**ಹಾನಿಯ ಲಕ್ಷಣಗಳು**

ಮರಿಹುಳುಗಳು ಎಳೆ ಬೇರನ್ನು ಕಡಿದು ತಿನ್ನುತ್ತವೆ. ಅಂತಹ ಮರಗಳ ಎಲೆಗಳು ಹಳದಿಯಾಗುತ್ತವೆ, ಮರಗಳು ಬುಡದಿಂದ ಮೇಲಕ್ಕೆ ಚೂಪಾಗುತ್ತವೆ. ಸಣ್ಣ ಕಾಯಿಗಳು ಉದುರುತ್ತವೆ. ಕ್ರಮೇಣ ಬಾಧೆಗೊಳಗಾದ ಮರಗಳು ಒಣಗುತ್ತವೆ

**ನಿರ್ವಹಣೆ**

1. ಮುಂಗಾರು ಹಂಗಾಮಿನ ಮೊದಲ ಮಳೆ ಬಿದ್ದ ಕೂಡಲೆ ಆ ದಿನ ರಾತ್ರಿ 7.30ರಿಂದ 8.30ರ ವರೆಗೆ ದುಂಬಿಗಳನ್ನು ದೀಪಾಕರ್ಷಣೆ ಮಾಡಿ ನಾಶಪಡಿಸಬೇಕು.
2. ಮುಂಗಾರು ಹಂಗಾಮಿನ ಮೊದಲ ಮಳೆ ಬಿದ್ದ ದಿನವೇ ಸಾಯಂಕಾಲ ಬೇವು,ಪೇರಲ ಮುಂತಾದ ಗಿಡಗಳ ಟೊಂಗೆಗಳಿಗೆ ಕೀಟನಾಶಕಗಳನ್ನು ಸಿಂಪಡಿಸಿ ಬದುಗಳ ಮೇಲೆ ನೆಡುವುದರಿಂದ ದುಂಬಿಗಳು ಆಕರ್ಷಿಸಲ್ಪಟ್ಟು ಸಾಯುತ್ತವೆ.
3. ಗಿಡದ ಬುಡಕ್ಕೆ ಮಣ್ಣಿನಲ್ಲಿ 10 ಮಿ.ಲೀ. ಕ್ಲೋರ್‌ಪೈರಿಫಾಸ್ 20 ಇ.ಸಿ. ಪ್ರತಿ ಲೀ. ನೀರಿಗೆ ಬೆರೆಸಿ ಸುರಿಯಬೇಕು.

# ರೋಗಗಳು

1. ಕೊಳೆರೋಗ (ಮಹಾಳಿ) ಹಾಗೂ ಚಿಗುರುಕೊಳೆ

**ರೋಗದ ಲಕ್ಷಣಗಳು**

ಗೊಂಚಲುಗಳ ಕಾಯಿಗಳ ಮೇಲೆ ಕಂದು ಬಣ್ಣದ ಶಿಲೀಂದ್ರದ ಬೆಳವಣಿಗೆ ಕಂಡು ಬರುತ್ತದೆ. ನಂತರ ಬಿಳಿ ಶಿಲೀಂದ್ರದ ಬೆಳವಣಿಗೆ ಕಂಡು ಬಂದು ಕಾಯಿಗಳು ಕೊಳೆಯಲು ಪ್ರಾರಂಭಿಸಿ, ಉದುರುತ್ತವೆ, ಗೊಂಚಲೆಲ್ಲಾ ಬೋಳು ಬೋಳಾಗಿ ಕಪ್ಪಾಗಿ ಕಾಣುತ್ತದೆ. ಗಿಡದ ಬೆಳವಣಿಗೆ ಕುಂಠಿತಗೊಂಡು ಇಳುವರಿಯಲ್ಲಿ ಹೆಚ್ಚಿನ ಹಾನಿ ಕಂಡು ಬರುತ್ತದೆ.

**ನಿರ್ವಹಣಾ ಕ್ರಮಗಳು**

ಕೊಳೆ ರೋಗ ಮತ್ತು ಸುಳಿಕೊಳೆಗಳನ್ನ ತಡೆಗಟ್ಟಲು ಶೇ. 1 ರ ಬೋರ್ಡೋ ದ್ರಾವಣ ಒಂದು ಲೀಟರ್ ನೀರಿನಲ್ಲಿ ಕರಗಿಸಿ, ಮಳೆಗಾಲ ಪ್ರಾರಂಭವಾಗುವುದಕ್ಕೆ ಮೊದಲು ಮತ್ತು ಮಳೆಗಾಲದಲ್ಲಿ ಸಿಂಪಡಿಸಬೇಕು. ಸುಳಿ ಕೊಳೆ ರೋಗ ನಿಯಂತ್ರಣಕ್ಕೆ ಮೇಲಿನ ಎಲೆಗಳನ್ನು ಕತ್ತರಿಸಿ, ಸ್ವಚ್ಛಗೊಳಿಸಿ, ಆಭಾಗಕ್ಕೆ ಶೇ. 1 ರ ಬೋರ್ಡೋ ದ್ರಾವಣವನ್ನು ತೊಯ್ಯುವಂತೆ ಸಿಂಪಡಿಸಬೇಕು. ಇದಲ್ಲದೇ ಕಾಯಿ ಗೊಂಚಲುಗಳನ್ನು (ಜೂನ್‌ದಲ್ಲಿ) ಪ್ಲಾಸ್ಟಿಕ್ ಹಾಳೆಯಿಂದ ಮುಚ್ಚುವದರಿಂದ ಕೊಳೆ ರೋಗವನ್ನು ನಿಯಂತ್ರಿಸಬಹುದು.

2. ಎಲೆ ಚುಕ್ಕೆ ರೋಗ

**ರೋಗದ ಲಕ್ಷಣಗಳು**

ಎಲೆಗಳ ಮೇಲೆ ಬೂದು ಮಿಶ್ರಿತ ಕಂದು ಬಣ್ಣದ ಚುಕ್ಕೆಗಳು ಕಂಡು ಬಂದು ದೊಡ್ಡದಾಗಿ ಕೂಡಿಕೊಂಡು ಎಲೆ ಸುಟ್ಟಂತೆ ಕಂಡು ಬರುವದು. ತೀವ್ರ ಬಾಧೆಗೊಳಗಾದ ಎಲೆಗಳು ಒಣಗಿ ಉದುರುತ್ತವೆ.

**ನಿರ್ವಹಣಾ ಕ್ರಮಗಳು**

ಎಲೆ ಚುಕ್ಕೆ ರೋಗ ಕಾಣಿಸಿಕೊಂಡಾಗ 2 ಗ್ರಾಂ ಮ್ಯಾಂಕೋಜೆಬ್ 75 ಡಬ್ಲ್ಯು.ಪಿ. ಅಥವಾ 3 ಗ್ರಾಂ ತಾಮ್ರದ ಆಕ್ಸಿಕ್ಲೋರೈಟ್ 50 ಡಬ್ಲ್ಯು.ಪಿ. ಒಂದು ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು.

3. ಅಣಬೆ ರೋಗ

**ರೋಗದ ಲಕ್ಷಣಗಳು**

ಗಿಡದ ಬೆಳವಣಿಗೆ ನಿಸ್ತೇಜವಾಗಿ ಕುಂಠಿತವಾಗಿರುತ್ತದೆ ವರ್ಷದಿಂದ ವರ್ಷಕ್ಕೆ ಇಳುವರಿ ಗಣನೀಯವಾಗಿ ಕಡಿಮೆಯಾಗುತ್ತಾ ಹೋಗುತ್ತದೆ. ಗಿಡದ ಬುಡದ ಕಾಂಡದಲ್ಲಿ ಅಣಬೆಯಾಕಾರದ ನಾಯಿಕೊಡೆ ತರಹದ ಶಿಲೀಂದ್ರದ ಹೊಣೆಯುವಿಕೆಯಿಂದ ಕೊಳೆತು ಕಪ್ಪಾಗಿರುತ್ತವೆ, ಗಿಡವು ನಿಧಾನವಾಗಿ ಸಾಯುವ ಹಂತ ತಲುಪುತ್ತದೆ. ನಿರ್ಲಕ್ಷಿತ ತೋಟಗಳಲ್ಲಿ ಹಾಗೂ ಹಳೆಯ ಮರಗಳಲ್ಲಿ ಈ ರೋಗ ಭಾದೆ ಹೆಚ್ಚು.

**ನಿರ್ವಹಣಾ ಕ್ರಮಗಳು**

ಅಣಬೆ ರೋಗದಿಂದ ಬಳಲುವ ಮರಗಳನ್ನು ಬೇರು ಸಹಿತ ಕಿತ್ತು ನಾಶಪಡಿಸಬೇಕು. ಸುತ್ತಲಿನ ಮರಗಳಿಗೆ ರೋಗ ಹರಡದಂತೆ ಮಾಡಲು ಮರದ ಸುತ್ತ 60 ಸೆಂ.ಮಿ. ಆಳದ 30 ಸೆಂ.ಮೀ. ಅಗಲದ ಹರಿಯನ್ನು ಮಾಡಿ ಉಳಿದ ಗಿಡಗಳಿಂದ ಬಾಧಿತ ಗಿಡವನ್ನು ಬೇರ್ಪಡಿಸಬೇಕು. ನೀರು ಚೆನ್ನಾಗಿ ಬಸಿದು ಹೋಗುವಂತೆ ನೋಡಿಕೊಳ್ಳಬೇಕು.ರೋಗ ತಗುಲಿದ ಮರದ ಬುಡಕ್ಕೆ ಶೇ. 0.3ರಷ್ಟು ಕ್ಯಾಲಿಕ್ಸಿನ್ ದ್ರಾವಣವನ್ನು ಬೇರಿನ ಮೂಲಕ ಮರ ಒಂದಕ್ಕೆ ಮೂರು ತಿಂಗಳಿಗೊಮ್ಮೆ 125 ಮಿ.ಲೀ. ನಂತರ ಜನವರಿ, ಮಾರ್ಚ, ಜುಲೈ ಮತ್ತು ಅಕ್ಟೋಬರ್ ತಿಂಗಳಗಳಲ್ಲಿ ಕೊಡಬೇಕು. ಪ್ರತಿ ವರ್ಷ ಒಂದು ಮರಕ್ಕೆ 2-3ಕಿ.ಗ್ರಾಂ ನಷ್ಟು ಬೇವಿನ ಹಿಂಡಿ ಗೊಬ್ಬರವನ್ನು ಕೊಡಬೇಕು ಶುಚಿತ್ವಕ್ಕೆ ಆದ್ಯತೆ ಕೊಡಬೇಕು ಒಣಗಿದ ಗಿಡಗಳನ್ನು ಬೇರುಸಹಿತ ಸುಟ್ಟು ಹಾಕಬೇಕು.

4. ಹಳದಿ ಎಲೆ ರೋಗ

**ರೋಗದ ಲಕ್ಷಣಗಳು**

ಲಕ್ಷಣಗಳೆಂದರೆ ಎಲೆಗಳ ಅಂಚು ಹಳದಿ ಬಣ್ಣಕ್ಕೆ ತಿರುಗಿ ನಂತರ ಪೂರ್ತಿ ಎಲೆಯು ಹಳದಿ ಮತ್ತು ಹಸಿರು ಪಟ್ಟೆಗಳಿಂದ ಮಿಶ್ರಿತವಾಗಿರುತ್ತದೆ. ನಂತರದ ಹಂತದಲ್ಲಿ ಎಲೆಗಳ ಒಣಗುವಿಕೆಯನ್ನು ಕಾಣುತ್ತೇವೆ. ಬಾಧೆಗೊಳಗಾದ ಮರದ ಅಡಿಕೆಯು ಕಂದು ಬಣ್ಣದ್ದಾಗಿದ್ದು ತಿನ್ನಲು ಯೋಗ್ಯವಾಗಿರುವುದಿಲ್ಲ. ಆಹಾರ ಸೇವನಾ ಬೇರುಗಳ ತುದಿಯು ಗಡುಸಾಗಿದ್ದು, ಕಪ್ಪು ಬಣ್ಣಕ್ಕೆ ತಿರುಗಬಹುದು.

**ನಿರ್ವಹಣಾ ಕ್ರಮಗಳು**

ಬಳಕೆಯಲ್ಲಿರುವ ಸಸ್ಯ ಸಂರಕ್ಷಣಾ ಕ್ರಮಗಳಿಂದ ಈ ರೋಗವನ್ನು ನಿಯಂತಿಸಲು ಸಾಧ್ಯವಿಲ್ಲದೇ ಇರುವುದರಿಂದ ರೋಗವನ್ನು ನಿಯಂತ್ರಣದಲ್ಲಿಡಲು ಮತ್ತು ಬಾಧಿತ ಮರಗಳ ಇಳುವರಿಯನ್ನು ಹೆಚ್ಚಿಸಲು ಈ ಕೆಳಗಿನ ನಿರ್ವಹಣಾ ಕ್ರಮಗಳನ್ನು ತೆಗೆದುಕೊಳ್ಳಬಹುದು.

- ಶಿಫಾರಸ್ಸು ಮಾಡಿದ ರಸಗೊಬ್ಬರಗಳನ್ನು ಒದಗಿಸುವುದು
- ಹಸಿರೆಲೆ ಮತ್ತು ತಿಪ್ಪೆಗೊಬ್ಬರಗಳನ್ನು ಒದಗಿಸುವುದು.
- ಒಂದು ಕಿ.ಗ್ರಾಂ. ಫಾಸ್ಪೇಟ್ ಗೊಬ್ಬರ, 2 ಕಿ.ಗ್ರಾಂ. ಬೇವಿನ ಹಿಂಡಿಯನ್ನು ಎರಡು ಕಂತುಗಳಲ್ಲಿ ಪ್ರತಿ ಗಿಡಕ್ಕೆ ಕೊಡಬೇಕು.

- ಏಪ್ರಿಲ್ ತಿಂಗಳಲ್ಲಿ ಸುಳಿತಿಗಣೆಯನ್ನು ನಿಯಂತ್ರಿಸಲು ರಂಧ್ರಗಳಿರುವ ಪ್ಲಾಸ್ಟಿಕ್ ಚೀಲದಲ್ಲಿ ೭ಗ್ರಾಂ. ಫೋರೇಟ್ ಹರಳುಗಳನ್ನು ಹಾಕಿ ಎಲೆಗಳಡಿಯಲ್ಲಿ ಇಡಬೇಕು.
- ಕೀಟಗಳ ನಿರ್ವಹಣೆಗೆ ಸೂಕ್ತ ಕ್ರಮಗಳನ್ನು ಅನುಸರಿಸಬೇಕು.
- ಬಸಿಗಲುವೆಗಳನ್ನು ನಿರ್ಮಿಸುವುದು
- ಅಲಸಂದಿ ಅಥವಾ ಇನ್ನಿತರ ಹಸಿರೆಲೆ ಬೆಳೆಗಳನ್ನು ಗಿಡಗಳ ನಡುವಿನ ಸ್ಥಳದಲ್ಲಿ ಬೆಳೆಯುವುದು
- ರೋಗ ಹರಡುವಿಕೆಯನ್ನು ತಡೆಗಟ್ಟಲು, ಬಾಧಿತ ಮರಗಳನ್ನು ತೆಗೆಯುವುದು

**ಕೃಷಿ ವಿಶ್ವ ವಿದ್ಯಾಲಯ ಧಾರವಾಡ**

**ಕೃಷಿ ವಿಜ್ಞಾನ ಕೇಂದ್ರ , ಉತ್ತರ ಕನ್ನಡ, ಶಿರಸಿ**